# ಅರೆರೆ... ಅಜ್ರೆಕ್ ಸೀರೆ

**ಅಜ್ರೆಕ್ ಸೀರೆ ಸದ್ಯ ಸುದ್ದಿಯಲ್ಲಿದೆ. ಹಗುರವಾಗಿದ್ದು, ಆಕರ್ಷಕ ಪ್ರಿಂಟ್ಸ್ ಹೊಂದಿರುವ ಅಜ್ರೆಕ್ ಸೀರೆಯ ಜೊತೆಗೆ ಕುರ್ತಾ, ಶಾಲು ಎಲ್ಲವೂ ಮಹಿಳೆಯರನ್ನು ಸೆಳೆಯುತ್ತಿದೆ.**



**ಅಕ್ಷತಾ ಮುಂಡಾಜೆ**

ಸೀರೆಯಲ್ಲಿ ಅದೆಷ್ಟು ವೈವಿಧ್ಯ. ಮೈಸೂರು ರೇಷ್ಮೆಯೂ ಸೇರಿದಂತೆ ವಿವಿಧ ರೀತಿಯ ರೇಷ್ಮೆ ಸೀರೆ, ಕಣ್ಣುಗಳನ್ನು ಸೆಳೆಯುವ ಅತ್ಯಾಕರ್ಷಕ ಬಣ್ಣಗಳ ಫ್ಯಾನ್ಸಿ ಸೀರೆ, ಖಾದಿ, ಕಾಟನ್ ಮುಂತಾದ ವೈವಿಧ್ಯಮಯ ಸೀರೆಗಳ ಸಾಲಿಗೆ ಅಜ್ರೆಕ್ ಸೀರೆ ಸೇರ್ಪಡೆ. ಹಲವಾರು ವರ್ಷಗಳ ಇತಿಹಾಸ ಇದಕ್ಕಿದ್ದರೂ ಕೆಲ ವರ್ಷ ತೆರೆಮರೆಯಲ್ಲೇ ಇದ್ದು ಈಗ ಫ್ಯಾಷನ್ ಟ್ರೆಂಡ್ ಆಗಿದೆ.

ಇದು ಉಡುಪುಗಳ ಹಿಂದಿನ ಕಥೆ. ಸೆಲೆಬ್ರಿಟಿಗಳು ಅಂದ್ರೆ ಸಾಕು ರಂಗಿ ಬಿರಂಗಿ ಬಟ್ಟೆ ಹಾಕೊಂಡು ಫೋಟೋಗೆ ಪೋಸ್ ಕೊಡೋರು ಅನ್ನೋ ಕಲ್ಪನೆ ಇದೆ. ಇತ್ತೀಚೆಗೆ ಕರೀನಾ ಹಾಕಿದ್ದ ಸಲ್ವಾರ್ ಕಮೀಜ್‌ವೊಂದು ತುಂಬಾ ಸುದ್ದಿಯಾಗಿತ್ತು. ನೋಡುವುದಕ್ಕೆ ಸಿಂಪಲ್ ಆಗಿದೆಯಲ್ಲ ಅನಿಸುವ ಈ ಬಟ್ಟೆ ಸಾವಿರಾರು ವರ್ಷಗಳ ಇತಿಹಾಸವನ್ನೇ ಹೊಂದಿದೆ.

ಅಜ್ರೆಕ್ ಹೆಸರೇ ಹೇಳುವಂತೆ ಆಜ್+ರೆಕ್ ಅಂದ್ರೆ ಇಂದು ಇಟ್ಟು ನಾಳೆ ಉಡೋಣ ಎಂದರ್ಥ. ಗುಜರಾತ್‌ನ ಕಚ್‌ನಲ್ಲಿರೋ ಅಜ್‌ರಕ್‌ಪುರ ಅನ್ನೋ ಪ್ರದೇಶದಲ್ಲಿ ಹುಟ್ಟಿಕೊಂಡ ಕಲೆಯಿದು. ಇಂದು ಇದು ಅದ್ಯಾವ ಮಟ್ಟಿಗೆ ಬೆಳೆದಿದೆಯೆಂದರೆ ವರ್ಷಕ್ಕೆ ಕೋಟ್ಯಂತರ ರೂಪಾಯಿಗಳ ವಹಿವಾಟು ನಡೆಸುತ್ತದೆ. ಅಷ್ಟಕ್ಕೂ ಈ ಅಜ್ರೆಕ್ ಸೀರೆ, ಕುರ್ತಾ, ಶಾಲು ಇವುಗಳ ವಿಶೇಷವಾದರೂ ಏನು?

ಮೊದಲೆಲ್ಲ ಈ ಕಲೆ ಸೀರೆಗಳಿಗೆ ಮಾತ್ರವೇ ಸೀಮಿತವಾಗಿತ್ತು. ಆದರೆ ಈಗ ಕಾಲ ಬದಲಾಗಿದೆ. ಕಾಲಕ್ಕೆ ತಕ್ಕಂತೆ ಅಜ್ರೆಕ್ ಪ್ರಿಂಟ್‌ಗಳನ್ನು ನಾವು ಕುರ್ತಾ ಶಾಲುಗಳಲ್ಲೂ ಕಾಣುವಂತಾಗಿದೆ. ಹಾಗೆಂದು ಇದು ಸಾಮಾನ್ಯ ಪ್ರಿಂಟಿಂಗ್ ಅಲ್ಲ. ಅದೆಷ್ಟೋ ವರ್ಷಗಳ ಹಿಂದಿನಿಂದಲೂ ಒಂದೇ ಕ್ರಮವನ್ನು ಬಳಸಿ ಈ ಪ್ರಿಂಟಿಂಗ್ ಮಾಡಲಾಗುತ್ತಿದೆ. ಪ್ರಿಂಟಿಂಗ್ ಪ್ರಕ್ರಿಯೆ ಸಹ ತುಂಬ ಆಸಕ್ತಿದಾಯಕ.

ಸಾಮಾನ್ಯವಾಗಿ ನಾವು ಅಜ್ರೆಕ್ ಸೀರೆಗಳನ್ನು ಕಂದು, ಬೂದು, ಹಳದಿ, ಕಡುಗೆಂಪು ಇಂತಹ ಗಾಢ ಬಣ್ಣಗಳಲ್ಲಿ ಕಾಣಬಹುದು. ವಿಶೇಷವೆಂದರೆ ಈ ಸೀರೆ ಸಿದ್ಧವಾಗುವುದಕ್ಕೆ ಮೊದಲು ಎಲ್ಲ ಸೀರೆಗಳ ಬಣ್ಣ ಬಿಳಿಯೇ ಆಗಿರುತ್ತದೆ. ರೇಷ್ಮೆಯ ಬಿಳಿ ಸೀರೆಯಲ್ಲಿ ಇದನ್ನು ಪ್ರಿಂಟ್ ಮಾಡಲಾಗುತ್ತದೆ. ಹೀಗಾಗಿ ಈ ಸೀರೆ ಜೇಬಿಗೆ ಸ್ವಲ್ಪ ದುಬಾರಿ ಅನಿಸೋದು. ಇದರ ಪ್ರಿಂಟಿಂಗ್ ಪ್ರೊಸೆಸ್ ಅನ್ನು ನೋಡಿದರೆ ಹಣ ಇನ್ನೂ ಸ್ವಲ್ಪ ಕಡಿಮೆಯೇ ಅನಿಸದೇ ಇರದು.

ಬಿಳಿ ಬಣ್ಣದ ಸೀರೆಯನ್ನು ಎರಡು ದಿನಗಳ ಕಾಲ ನೀರಿನಲ್ಲಿ ನೆನೆಹಾಕಿ ಬಳಿಕ ಒಣಗಿಸಲಾಗುತ್ತದೆ. ಇದರಿಂದ ಸೀರೆಯಲ್ಲಿ ಯಾವ ಸಣ್ಣ ಪುಟ್ಟ ಕಲೆಗಳಿದ್ದರೂ ಹೋಗುತ್ತದೆ. ಹೀಗೆ ತೊಳೆದ ಸೀರೆಯನ್ನು ಟೇಬಲ್‌ನ ಮೇಲಿಟ್ಟು ಅಂಚುಗಳನ್ನು ಪಿನ್ ಮಾಡಿ ಪುರಾತನ ಕಾಲದಿಂದಲೂ ಬಳಸಿಕೊಂಡು ಬಂದಿರುವ ಅಚ್ಚಿನ ಕಲ್ಲುಗಳಿಂದಲೇ ಇದರಲ್ಲಿ ಚಿತ್ತಾರವನ್ನು